ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

**ಸಂಪುಟ–7, ಸಂಚಿಕೆ–2** ತ್ರೈಮಾಸಿಕ, ಏಪ್ರಿಲ್ – ಜೂನ್ 2020 **ಪುಟಗಳು–12**



# ದಿನಾಂಕ 26–01–2020 ರಂದು ಬೆವಿಕಂನ ನಿಗಮ ಕಛೇರಿಯಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.















# Message from Managing Director



ಸಂಪಾದಕೀಯ:

ಆತ್ಮೀಯರೇ,

ಹೊಸವರ್ಷ ಶಾರ್ವರಿ ನಾಮ ಸಂವತ್ಸರವು ಆರಂಭವಾಗಿದ್ದು ನೂತನ ವರ್ಷದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ. ಹೊಸ ವರ್ಷದಲ್ಲಿ ನಾವು ಮತ್ತಷ್ಟು ಬದ್ಧತೆ ಮತ್ತು ಕ್ಷಮತೆಯಿಂದ ಕಾರ್ಯೋನ್ಮುಖವಾಗಲು ಪುನರ್ ಸಮರ್ಪಿಸಿಕೊಳ್ಳೋಣ.

ಇಡೀ ವಿಶ್ವವು ಕೋವಿಡ್-19 ವೈರಸ್ ಹಾವಳಿಯಿಂದ ತಲ್ಲಣಿಸಿರುವ ಈ ಹೊತ್ತಿನಲ್ಲಿ ಅವಶ್ಯಕ ಸೇವೆಗಳಿಗೆ ಅಗತ್ಯವಾದ ವಿದ್ಯುತ್ ಪೂರೈಕೆಯಲ್ಲಿ ಬೆಸ್ಕಾಂ ಸಂಸ್ಥೆ ತನ್ನ ವ್ಯಾಪ್ತಿಯ ಪ್ರದೇಶಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುವುದು ತುರ್ತು ಅಗತ್ಯವಾಗಿದೆ. ಒಂದೆಡೆ ಏರುತ್ತಿರುವ ಬಿಸಿಲು ಹಾಗೂ ಮತ್ತೊಂದೆಡೆ ವೈರಸ್ ಹರಡುವ ಭೀತಿಯ ಸಮಯದಲ್ಲಿ ಬೆಸ್ಕಾಂ ಸಂಸ್ಥೆಗೆ ಕಠಿಣ ಸವಾಲು ಎದುರಾಗುವುದು ಸಹಜ. ಆದರೆ ಎಲ್ಲ ಸಂಕಷ್ಟ ಸಮಯವನ್ನು ಸವಾಲಾಗಿ ಸ್ವೀಕರಿಸಿ ಸಮಸ್ಯೆಗಳಿಗೆ ಪರಿಹಾರವನ್ನು ಯಶಸ್ವಿಯಾಗಿ ಕಂಡುಕೊಂಡಿರುವ ಬೆಸ್ಕಾಂ ಸಿಬ್ಬಂದಿ ಇಂಥ ಸನ್ನಿವೇಶದಲ್ಲೂ ತಮ್ಮ ಅನುಭವಗಳನ್ನು ಸೂಕ್ತ ರೀತಿಯಲ್ಲಿ ಬಳಸಿ ಪರಿಸ್ಥಿತಿಯನ್ನು ನಿಭಾಯಿಸುತ್ತಾರೆ ಎಂಬ ವಿಶ್ವಾಸ ನನಗಿದೆ.

ವಿದ್ಯುತ್ ಪೂರೈಕೆಗೆ ಸಂಬಂಧಿಸಿದಂತೆ ಬೇಸಿಗೆಯ ಕಾಲ ಸದಾ ದೊಡ್ಡ ಸವಾಲುಗಳನ್ನು ಒಡ್ಡುತ್ತದೆ. ರೈತರ ವಿದ್ಯುತ್ ಅಗತ್ಯದ ಪ್ರಮಾಣ ಈ ಕಾಲದಲ್ಲೂ ಅಧಿಕವಾಗಿರುತ್ತದೆ. ಗೃಹ ಬಳಕೆಯ ವಿದ್ಯುತ್ ಬೇಡಿಕೆ ಸಹ ಹೆಚ್ಚೇ ಇರುತ್ತದೆ. ಅಲ್ಲದೆ, ಜಲ ವಿದ್ಯುತ್ ಯೋಜನೆಗಳಿಂದ ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣ ಕಡಿಮೆಯಾಗುವುದರಿಂದ ಪರಿಸ್ಥಿತಿ ಸೂಕ್ಷ್ಮವಾಗುವುದು ಸಹಜ. ಹಾಗಾಗಿ ವಿದ್ಯುತ್ ಸರಬರಾಜಿನಲ್ಲಿ ಅತ್ಯಲ್ಪ ವ್ಯತ್ಯಯವಾದರೂ ಗ್ರಾಹಕರಿಂದ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಇಂಥ ಸನ್ನಿವೇಶಗಳನ್ನು ನಿರೀಕ್ಷಿಸಿ ಗ್ರಾಹಕರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಅಗತ್ಯಕ್ರಮಗಳನ್ನು ಒಂದು ತಂಡವಾಗಿ ನಾವೆಲ್ಲರೂ ಕೈಗೊಳ್ಳುವ ಪಣ ತೊಡೋಣ.

ಕೇಂದ್ರ ಸರ್ಕಾರದ ನವ ಮತ್ತು ನವೀಕೃತ ಇಂಧನ ಇಲಾಖೆಯು ವಸತಿ ಗೃಹಗಳ ಮೇಲ್ಛಾವಣಿಯ ಮೇಲೆ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ಸಹಾಯಧನ ನೀಡುವ ಎರಡನೇ ಹಂತದ 'ಸೌರಗೃಹ ಯೋಜನೆ' ಯನ್ನು ಆರಂಭಿಸಿದೆ. ವೈಯಕ್ತಿಕ ವಸತಿ ಗೃಹಗಳಿಗೆ ಒಂದರಿಂದ ನಾಲ್ಕು ಕಿಲೋವ್ಯಾಟ್ ವಿದ್ಯುತ್ ಉತ್ಪಾದನೆಗೆ ಶೇ.40 ರಷ್ಟು ಸಹಾಯಧನ ಹಾಗೂ 4 ರಿಂದ 10 ಕಿಲೋವ್ಯಾಟ್ ಸಾಮರ್ಥ್ಯದ ಘಟಕಗಳನ್ನು ಅಳವಡಿಸಲು ಶೇ.20 ರಷ್ಟು ಸಹಾಯಧನ ನೀಡಲಾಗುವುದು. ಹಾಗೆಯೇ ವಸತಿ ಸಮುಚ್ಛಯಗಳು ಮತ್ತು ನಿವಾಸಿ ಕಲ್ಯಾಣ ಸಂಘಗಳ ವಸತಿಗಳಿಗೆ ಶೇ.20 ರಷ್ಟು ಸಹಾಯಧನ ನೀಡುವ ಯೋಜನೆ ಇದಾಗಿದೆ. 2020 ರ ವೇಳೆಗೆ ಗೃಹ ಛಾವಣಿಯ ಮೇಲೆ ವಿದ್ಯುತ್ ಉತ್ಪಾದನೆಯ ಗುರಿಯನ್ನು 1200 ಮೆಗಾ ವ್ಯಾಟ್ ಗೆ ನಿಗದಿಪಡಿಸಿದ್ದು, ಇದನ್ನು ತಲುಪುವ ನಿಟ್ಟಿನಲ್ಲಿ ಬೆಸ್ಕಾಂ ಸಿಬ್ಬಂದಿ ಹೆಚ್ಚಿನ ಉತ್ಸಾಹದಿಂದ ಭಾಗವಹಿಸಬೇಕಿದೆ. ಕೇಂದ್ರ ಸರ್ಕಾರದ ಇಂಧನ ಇಲಾಖೆಯು ಈ ಬಾರಿ ನಿಗದಿಪಡಿಸಿರುವ 30 ಮೆಗಾವ್ಯಾಟ್ ಉತ್ಪಾದನೆಯ ಗುರಿಯನ್ನು ತಲುಪಲು ಶ್ರಮಿಸೋಣ. ನಮ್ಮೆಲ್ಲರ ಶ್ರಮ ಫಲ ಪ್ರದವಾಗಲಿ ಎಂದು ಹಾರೈಸುತ್ತೇನೆ.

**ಶ್ರೀ ಎಂ. ಬಿ. ರಾಜೇಶ್ ಗೌಡ,**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

## ಸಂಪಾದಕೀಯ

ಆತ್ಮೀಯರೆ,

ಪ್ರತಿವರ್ಷ ಬೇಸಿಗೆ ಕಾಲವನ್ನು ನಾವು ಸಂತಸದಿಂದಲೇ ಬರಮಾಡಿಕೊಳ್ಳುತ್ತೇವೆ.

ಮಾರ್ಚ್ ತಿಂಗಳಲ್ಲಿಯೇ ಯುಗಾದಿ ಬರುತ್ತದೆ, ಬೇವು-ಬೆಲ್ಲವನ್ನು ಸವಿಯುವ ಮೂಲಕ ಹಬ್ಬವನ್ನು ಸಂಭ್ರಮದಿಂದ ಆಚರಿಸಿ ಆ ಮೂಲಕ ಹೊಸ ಸಂವತ್ಸರವನ್ನು ಸ್ವಾಗತಿಸುತ್ತೇವೆ.

ಚೈತ್ರ ಮತ್ತು ವೈಶಾಖ ಮಾಸಗಳೆಂದರೆ ಗಿಡ-ಮರಗಳು ಚಿಗುರುವ ಕಾಲ, ಕೋಗಿಲೆಯ ಸುಮಧುರ ಧ್ವನಿ ಎಲ್ಲೆಡೆ ಕೇಳಿ ಬರುವ ಸಂದರ್ಭ.

ಆದರೆ ಈ ಬಾರಿ ಪರಿಸ್ಥಿತಿ ಬೇರೆಯೇ ಆಗಿದೆ. ಕೊರೋನಾ ವೈರಸ್ ಮೂಲಕ ಕೋವಿಡ್-19 ಎಂಬ ಕಾಯಿಲೆ ಡಿಸೆಂಬರ್ ತಿಂಗಳಿಂದಲೇ ವಿಶ್ವವ್ಯಾಪಿಯಾಗಿ ಹರಡಿ ಜಗತ್ತಿನ ಮಹಾಮಾರಿಯಾಗಿ ಎಲ್ಲೆಡೆ ಕಾಡುತ್ತಿದೆ. ಇದು ತೀವ್ರಸ್ವರೂಪವಾಗಿ ಹರಡುತ್ತಿದೆ ಹಾಗೂ ಅದನ್ನು ಗುಣಪಡಿಸಲು ಸೂಕ್ತವಾದ ಔಷಧಿ ಕೂಡ ಇಲ್ಲದಿರುವುದು ಜನರ ಆತಂಕಕ್ಕೆ ಕಾರಣವಾಗಿದೆ.

ಈ ರೋಗ ಹರಡದಂತೆ ತಡೆಯಲು ರಾಜ್ಯ ಸರ್ಕಾರ ಈಗಾಗಲೇ ಹಲವು ಕಾರ್ಯಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದೆ.

ಇಂತಹ ಸಂದರ್ಭದಲ್ಲಿ 'ಬೆಸ್ಕಾಂ' ಸಿಬ್ಬಂದಿ ಹಾಗೂ ಅಧಿಕಾರಿಗಳಾದ ನಾವು ಸರ್ಕಾರದ ಕ್ರಮಕ್ಕೆ ಅಗತ್ಯ ಸಹಕಾರ ನೀಡಲೇಬೇಕು. ಈ ಕಾಯಿಲೆಯನ್ನು ತಡೆಗಟ್ಟದೆ ಹೋದರೆ ಮುಂದೆ ಆಗಬಹುದಾದ ಅನಾಹುತಗಳು ಊಹೆಗೂ ನಿಲುಕಲಾರವು. ಆದರೆ ಕಾಯಿಲೆ ತಡೆಗಟ್ಟುವ ಧಾವಂತದಲ್ಲಿ ನಾವು ಎಚ್ಚರಿಕೆ ವಹಿಸುವುದನ್ನು ಮರೆಯಬಾರದು.

ಮನೆ ಹಾಗೂ ಕಚೇರಿಯಿಂದ ಹೊರಗಡೆ ಕಾರ್ಯನಿರ್ವಹಿಸುವ ಸಿಬ್ಬಂದಿ ಮುಖಗವುಸು ಧರಿಸಬೇಕು ಹಾಗೂ ಸ್ಯಾನಿಟೈಸರ್‌ಗಳನ್ನು ಬಳಸಿ, ಸೋಪನ್ನು ಉಪಯೋಗಿಸಿ ಕೈ ತೊಳೆದುಕೊಳ್ಳುವುದು, ಇವೇ ಮೊದಲಾದ ಎಚ್ಚರಿಕೆಯ ಕ್ರಮವನ್ನು ಅನುಸರಿಸುವುದು ಕಡ್ಡಾಯ.

ಬೇಸಿಗೆಯ ಕಾಲ ಎಂದ ಮೇಲೆ ಸಾರ್ವಜನಿಕರು ಫ್ಯಾನ್, ರೆಫ್ರಿಜಿರೇಟರ್, ಎ.ಸಿ. ಮುಂತಾದ ವಿದ್ಯುತ್ ಪರಿಕರಗಳ ಬಳಕೆ ಹೆಚ್ಚಿರುತ್ತದೆ.

ಕೃಷಿ ಚಟುವಟಿಕೆಗಳಿರುವ ಕಡೆ ಪಂಪ್‌ಸೆಟ್‌ಗಳ ಬಳಕೆಯೂ ಜಾಸ್ತಿ ಇರುತ್ತದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿ ಲಭ್ಯವಿರುವ ವಿದ್ಯುತ್ತನ್ನೇ ಸಮರ್ಪಕವಾಗಿ ಸರಬರಾಜು ಮಾಡುವ ಹೊಣೆ ನಮ್ಮ ಮೇಲಿದೆ.

ವಿದ್ಯುತ್ ವ್ಯತ್ಯಯಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಾಗ ಅವುಗಳನ್ನು ಸಹನೆಯಿಂದ ಸ್ವೀಕರಿಸಿ ಪರಿಹರಿಸಿಕೊಡುವ ಜವಾಬ್ದಾರಿ ನಮ್ಮ ಮೇಲಿದೆ. ಈ ನಿಟ್ಟಿನಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಸಹಕರಿಸಬೇಕೆಂದು ಕೋರುತ್ತೇನೆ.

ಕೋವಿಡ್ ಮಹಾಮಾರಿ ಸಂಪೂರ್ಣ ನಿಯಂತ್ರಣಕ್ಕೆ ಬಂದು ತಮ್ಮೆಲ್ಲರಿಗೂ ಶುಭವಾಗಲಿ ಎಂದು ನಾನು ಹಾರೈಸುತ್ತೇನೆ.

**ಶ್ರೀ ಪಿ. ಕೃಷ್ಣಮೂರ್ತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) ಬೆಸ್ಕಾಂ.

# ನಮ್ಮ ಊರು, ನಮ್ಮ ಜಿಲ್ಲೆ – ಶಿವಮೊಗ್ಗ

ಮಲೆನಾಡು ಭಾಗದ ಜಿಲ್ಲೆಗಳಲ್ಲಿ ಹೆಚ್ಚು ಪ್ರಾಮುಖ್ಯತೆಗಳಿಸಿರುವ ಜಿಲ್ಲೆ ಶಿವಮೊಗ್ಗ.

ರಾಜಕೀಯ, ಸಾಹಿತ್ಯ, ಸಂಸ್ಕೃತಿ ಕ್ಷೇತ್ರಗಳಲ್ಲಿ ರಾಜ್ಯಕ್ಕೆ ಅತಿ ಹೆಚ್ಚು ಕೊಡುಗೆ ನೀಡಿರುವ ಜಿಲ್ಲೆ ಇದಾಗಿದೆ.

ಇಲ್ಲಿಂದ ನಾಲ್ಕು ಜನ ಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿಸಿದ್ದಾರೆ. ಕಡಿದಾಳು ಮಂಜಪ್ಪ, ಎಸ್. ಬಂಗಾರಪ್ಪ, ಜೆ.ಎಚ್.ಪಟೇಲ್ ಹಾಗೂ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಗಳಾದವರಾಗಿದ್ದಾರೆ. ಮಹಾಕವಿ ಕುವೆಂಪು ಹಾಗೂ ಯು.ಆರ್.ಅನಂತಮೂರ್ತಿ, ಇಬ್ಬರು ಜ್ಞಾನಪೀಠ ಪುರಸ್ಕೃತರೂ ಈ ಜಿಲ್ಲೆಯವರೇ ಆಗಿದ್ದಾರೆ.

ಮೂಲತಃ 9 ತಾಲ್ಲೂಕುಗಳಿಂದ ಕೂಡಿದ್ದ ಈ ಜಿಲ್ಲೆಯ ಎರಡು ತಾಲ್ಲೂಕುಗಳಾದ ಹೊನ್ನಾಳಿ ಮತ್ತು ಚನ್ನಗಿರಿಯನ್ನು 1997ರಲ್ಲಿ ಹೊಸದಾಗಿ ರಚಿಸಿದ ದಾವಣಗೆರೆ ಜಿಲ್ಲೆಗೆ ಸೇರಿಸಲಾಯಿತು.

ಈಗ ಹಾಲಿ ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ, ಶಿಕಾರಿಪುರ, ಹೊಸನಗರ, ಸಾಗರ ಹಾಗೂ ಸೊರಬ ಸೇರಿದಂತೆ ಏಳು ತಾಲ್ಲೂಕುಗಳಿವೆ.


ಜಿಲ್ಲೆಯಲ್ಲಿ ಅಂದಾಜು 20 ಲಕ್ಷ ಜನಸಂಖ್ಯೆ ಇದೆ. ಅಡಿಕೆ, ಭತ್ತ, ಕಬ್ಬು, ತೆಂಗು, ರಾಗಿ, ಜೋಳ, ಮೆಕ್ಕೆಜೋಳ, ಶೇಂಗಾ ಪ್ರಮುಖ ಬೆಳೆಗಳು.

ತುಂಗಾ, ಭದ್ರಾ, ಶರಾವತಿ, ವರದ ಮತ್ತು ಕುಮುದ್ವತಿ ಪ್ರಮುಖ ನದಿಗಳಾಗಿವೆ.

ವಿಶ್ವವಿಖ್ಯಾತ ಜೋಗ್ ಜಲಪಾತ ಸೇರಿದಂತೆ ಹಲವಾರು ನಿಸರ್ಗ ಸುಂದರವಾದ ಪ್ರವಾಸಿ ತಾಣಗಳನ್ನು ಜಿಲ್ಲೆ ಹೊಂದಿದೆ.

**ಕವಲೇದುರ್ಗ:** ವಿಜಯನಗರ ಸಾಮ್ರಾಜ್ಯದ ಪತನದ ನಂತರ ಕರ್ನಾಟಕದಲ್ಲಿ ಹಲವು ಸಣ್ಣ ಪುಟ್ಟ ರಾಜಮನೆತನಗಳು ತಲೆ ಎತ್ತಿಕೊಂಡವು ಅವುಗಳಲ್ಲಿ ಕೆಳದಿ ಸಂಸ್ಥಾನವು ಮುಖ್ಯವಾದುದು. ಬಿದನೂರಿನ ರಾಣಿ ಚೆನ್ನಮ್ಮ ಕ್ರಿ.ಶ.1671 ರಿಂದ 1697 ರವರೆಗೆ ಭುವನಗಿರಿಯನ್ನು ತನ್ನ ಉಪರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತವನ್ನು ನಡೆಸಿದಳು. ಈ ಭುವನಗಿರಿಯೇ ಕವಲೇದುರ್ಗ. ಮೊದಲಿಗೆ ಈ ಕೋಟೆಯನ್ನು ಕಾವಲುದುರ್ಗ ಎಂದು ಕರೆಯುತ್ತಿದ್ದರು. ಪುರಾತನ ಕೋಟೆ, ಅರಮನೆಯ ಅವಶೇಷಗಳು, ಬತೇರಿಗಳು, ಪಾಳು ಬಿದ್ದ ದೇವಾಲಯಗಳು ಇಲ್ಲಿವೆ.

**ಕುಂದಾದ್ರಿ ಬೆಟ್ಟ:** ತೀರ್ಥಹಳ್ಳಿ ಸಮೀಪವಿರುವ ಒಂದು ಪುರಾತನ ಬೆಟ್ಟವು ಕುಂದಾದ್ರಿ ಬೆಟ್ಟವೆಂದು ಪ್ರಸಿದ್ಧಿಯಾಗಿದೆ. ಈ ಪ್ರದೇಶವು ಹಿಂದಿನ ಕಾಲದಲ್ಲಿ ಹೆಸರಾಂತ ಜೈನ ತೀರ್ಥ ಕ್ಷೇತ್ರವಾಗಿತ್ತು. ಕುಂದಕುಂದಾಚಾರ್ಯರೆಂಬ ಮುನಿಗಳು ಇಲ್ಲಿ ತಪಸ್ಸನ್ನು ಮಾಡಿಕೊಂಡು ಆಶ್ರಮವನ್ನು ಸ್ಥಾಪಿಸಿದ್ದರೆಂದು ಹೇಳಲಾಗಿದೆ. ಅವರು ನೆಲೆಸಿದ ಸ್ಥಳಕ್ಕೆ ಅವರ ಹೆಸರೇ ಬಂದು ಕುಂದಾದ್ರಿ ಬೆಟ್ಟವೆನಿಸಿತು.





ಒಂದು ಬಂಡೆಯ ಮೇಲೆ ಈ ಮುನಿಗಳ ಪಾದಗಳ ಕೆತ್ತನೆಯನ್ನು ಕಾಣಬಹುದು.

ಸ್ಥಳ ಪುರಾಣದ ಪ್ರಕಾರ, ಇಲ್ಲಿ ತೊಂದರೆಯನ್ನು ಕೊಡುತ್ತಲಿದ್ದ ಒಬ್ಬ ರಕ್ಕಸನನ್ನು ತಮ್ಮ ದಿವ್ಯದೃಷ್ಟಿಯಿಂದ ಮುನಿಗಳು ನಾಶಪಡಿಸಿದರೆಂದು ಹೇಳುತ್ತಾರೆ.

**ಜೋಗದ ಜಲಪಾತ**: ಕರ್ನಾಟಕಕ್ಕೆ ಪ್ರಕೃತಿಯು ನೀಡಿದ ವರದಾನವೇ ವಿಶ್ವವಿಖ್ಯಾತ ಜೋಗದ ಜಲಪಾತ.

ಅಂಬುತೀರ್ಥದಲ್ಲಿ ಹುಟ್ಟಿ ಸುತ್ತಮುತ್ತಲ ಗಿರಿ ಶಿಖರಗಳಲ್ಲಿ ಹರಿದು ಜೋಗದಲ್ಲಿ ಸುಮಾರು 900 ಅಡಿ ಎತ್ತರದಿಂದ ನಾಲ್ಕು ಕವಲುಗಳಾಗಿ ಶರಾವತಿ ನದಿ ಧುಮುಕುವ ನಯನ ಮನೋಹರ ದೃಶ್ಯವೇ ಜೋಗದ ಜಲಪಾತ.



ಹಸಿರು ವನರಾಶಿ ನಡುವೆ ನಾಲ್ಕು ಕವಲುಗಳಾದ ರಾಜ, ರೋರರ್, ರಾಕೆಟ್ ಮತ್ತು ಲೇಡಿ ಧುಮುಕುವುದನ್ನು ಮಳೆಗಾಲದಲ್ಲಿ ನೋಡುವುದೇ ಕಣ್ಣಿಗೆ ಹಬ್ಬ.

ಶಿವಮೊಗ್ಗದಿಂದ ಸಾಗರ ಮಾರ್ಗವಾಗಿ ಸುಮಾರು 100 ಕಿ.ಮೀ. ದೂರದಲ್ಲಿರುವ ಈ ಸ್ಥಳಕ್ಕೆ ಪ್ರತಿವರ್ಷ ಸಹಸ್ರಾರು ಪ್ರವಾಸಿಗರು ಭೇಟಿ ನೀಡುತ್ತಾರೆ.

**ಆಗುಂಬೆ :** ಸೂರ್ಯಾಸ್ತಮಾನದ ವೀಕ್ಷಣೆಗೆ ಹೆಸರಾದ ಆಗುಂಬೆ ತೀರ್ಥಹಳ್ಳಿಗೆ ಸುಮಾರು 30 ಕಿ.ಮೀ. ದೂರದಲ್ಲಿದೆ. ಚಾರಣಪ್ರಿಯರಿಗೆ ಹೇಳಿಮಾಡಿಸಿದ ತಾಣವಾದ ಆಗುಂಬೆಯನ್ನು ದಕ್ಷಿಣದ ಚಿರಾಪುಂಜಿ ಎಂದು ಕರೆಯುತ್ತಾರೆ.

ಅಸ್ಸಾಮಿನ ಚಿರಾಪುಂಜಿಯನ್ನು ಬಿಟ್ಟರೆ ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಮಳೆ ಬೀಳುವ ಸ್ಥಳ ಆಗುಂಬೆಯಾಗಿತ್ತು.

ಬೇಸಿಗೆಯಲ್ಲಿ ತಂಪಾಗಿರುವ ಇಲ್ಲಿ ಈಗ ಮಳೆಯ ಪ್ರಮಾಣ ಕೂಡ ಕಡಿಮೆಯಾಗಿದೆ. ಆಗುಂಬೆಯ ಸುತ್ತಮುತ್ತ ಕೆಲವು ಸುಂದರವಾದ ಜಲಪಾತಗಳನ್ನೂ ನೋಡಬಹುದು.

**ಗುಡವಿ ಪಕ್ಷಿಧಾಮ:** ಸೊರಬ ಸಮೀಪ ಇರುವ ಗುಡವಿ ಪಕ್ಷಿಧಾಮ ರಾಜ್ಯದ ಐದು ಪ್ರಮುಖ ಪಕ್ಷಿಧಾಮಗಳಲ್ಲಿ ಒಂದೆಂಬ ಕೀರ್ತಿಯನ್ನು ಪಡೆದಿದೆ.

ಸುಮಾರು ಎರಡು ನೂರು ವರ್ಷಗಳ ಇತಿಹಾಸವಿರುವ ಪುರಾತನ ಕೆರೆಗಳಲ್ಲಿ ಬೆಳೆದ ನೆಮ್ಮದಿಯ ನೆಲೆಯನ್ನು ಕಂಡ ಬಾನಾಡಿಗಳ ತಾಣ ಈ ಗುಡವಿ.

ಇದು ಸುಮಾರು 74 ಹೆಕ್ಟೇರುಗಳ ವಿಸ್ತೀರ್ಣವನ್ನು ಹೊಂದಿದ್ದು 30 ಹೆಕ್ಟೇರುಗಳ ನೀರಿನ ಆಶ್ರಯವನ್ನು ಪಡೆದಿದೆ.

ಅರಣ್ಯ ಇಲಾಖೆಯವರು ಇತ್ತೀಚೆಗೆ ಇದನ್ನು ಅಭಿವೃದ್ಧಿಪಡಿಸಿ, ಪಕ್ಷಿಗಳಿಗೆ ರಕ್ಷಣೆಯನ್ನು ನೀಡಿ ಒಂದು ಉತ್ತಮ ಪಕ್ಷಿಧಾಮವನ್ನಾಗಿ ಮಾಡಿದ್ದಾರೆ.

**ತ್ಯಾವರೆ ಕೊಪ್ಪ:** ಶಿವಮೊಗ್ಗ ನಗರಕ್ಕೆ ಸಮೀಪದಲ್ಲಿರುವ ತ್ಯಾವರೆ ಕೊಪ್ಪ ಹುಲಿ ಮತ್ತು ಸಿಂಹಧಾಮ ಹಲವು ಸಮಸ್ಯೆಗಳ ನಡುವೆಯೂ ಆಕರ್ಷಕ ಸಫಾರಿಯಾಗಿ ಬೆಳೆಯುತ್ತಲಿದೆ. ಇಲ್ಲಿ ಜುನಾಗಡ್ ಮೃಗಾಲಯದಿಂದ ತಂದ ಶುದ್ಧ ಏಷ್ಯಾ ತಳಿಯ ಸಿಂಹಗಳನ್ನು ಸಾಕಲಾಗುತ್ತಿದೆ.

**ಸಾಗರದ ಮಾರಿಕಾಂಬಾ ದೇವಾಲಯ:** ಜೋಗದ ಜಲಪಾತಕ್ಕೆ ಹೋಗುವ ದಾರಿಯಲ್ಲಿರುವ ಸಾಗರ ಪಟ್ಟಣವು ಪ್ರಾಚೀನ ಕಾಲದಲ್ಲಿ ಸಗರಪುರ ಎಂಬ ಅಗ್ರಹಾರವಾಗಿತ್ತು. ಪೌರಾಣಿಕವಾಗಿ ಸಗರ ಚಕ್ರವರ್ತಿಯು



ಕಟ್ಟಿಸಿದ ನಗರವೆಂದು ಹೇಳಲಾಗಿದೆ.

ಶಿವಪ್ಪನಾಯಕನ ಮೂಲಪುರುಷರು ಇಲ್ಲಿ ರಾಜ್ಯಾಡಳಿತವನ್ನು ಮಾಡಿದ್ದಾರೆ. ಆದಿ ಶಂಕರಚಾರ್ಯರು ಇಲ್ಲಿಗೆ ಪ್ರವಾಸ ಬಂದಾಗ ಊರಿನ ಗಡಿಗಾಗಿ ಒಂದು ಅದಿದೇವತೆಯನ್ನು ಪ್ರತಿಷ್ಠಾಪಿಸಿದರು. ಅದೇ ಈಗಿನ ಮಾರಿಕಾಂಬಾ ದೇವಾಲಯ ಎಂದಾಗಿದೆ.


ಶಿವಪ್ಪನಾಯಕ ಸೇರಿದಂತೆ ಕೆಳದಿಯ ಅರಸರು ಈ ದೇವಿಯನ್ನು ಆರಾಧ್ಯ ದೈವವಾಗಿ ಪೂಜಿಸಿದ್ದಾರೆ

## ವಿದ್ಯುತ್ ಸುರಕ್ಷತೆಯ ಕುರಿತಂತೆ ಗ್ರಾಹಕರಲ್ಲಿ ಅರಿವು ಮೂಡಿಸುವ ಸಲುವಾಗಿ ಬೆವಿಕಂ, ತನ್ನ ವ್ಯಾಪ್ತಿಯ ಪಾವಗಡ, ತುಮಕೂರು ಜಿಲ್ಲೆಯಲ್ಲಿ ಸುರಕ್ಷತಾ ಜಾಥಾವನ್ನು ನಡೆಸಿತು.









# ಅಪ್ಪ ಎಂಬ ಅಜಾತಶತ್ರು

ತಂದೆ ಎಂಬುದು ಬರೀ ಎರಡಕ್ಷರದ ಪದವಲ್ಲ.!

ಸಾಧಾರಣ ವ್ಯಕ್ತಿಯಾಗಿ ಎಲ್ಲರ ಜವಾಬ್ದಾರಿಯನ್ನು ತನ್ನ ಹೆಗಲಮೇಲೆ ಹೊತ್ತು ಸಂಸಾರದ ನೌಕೆಯನ್ನು ಸಾಗಿಸುವ ಧೀರ.. ನೂರಾರು ಯೋಚನೆಯ ಗಟ್ಟಿಗುಂಡಿಗೆಯಿದ್ದರೂ ಮನೆಯವರ ಭಾವಕ್ಕೆ ರಾಗ ಬೆಸೆದ ಸಂಗೀತಗಾರ. ಸಮಸ್ಯೆಗಳ ಸವಾಲುಗಳನ್ನು ದಾಟಿ ಸೋಲನ್ನು ಗೆದ್ದು ಬರುವ ವೀರ. ತಾನೊಂದು ನೆಲೆ ಕಂಡುಕೊಂಡು ಇತರರಿಗೂ ಸೂರು ಕಲ್ಪಿಸಿಕೊಡುವ ಸರದಾರ.

ತನಗಿಂತ ತನ್ನ ಹಸುಳೆಗಳ ಯಶಸ್ಸಿಗೆ ಸದಾ ತುಡಿಯುವ ಮಹಾಪುರುಷ; ಪ್ರತಿ ಮನೆಯ ಕಥಾನಾಯಕ.

ಪ್ರತಿಯೊಬ್ಬರಿಗೂ ತಾಯಿ ಹೇಗೆ ಮೊದಲ ಗುರುವೋ ಹಾಗೆ ತಂದೆ ಮೊದಲ ಹೀರೊ! ಅಂತ ತಂದೆಯನ್ನು ಪಡೆದ ಎಷ್ಟೋ ಮಕ್ಕಳು ಅವರನ್ನೇ ದೇವರೆಂದು ಪೂಜಿಸುತ್ತಾರೆ. ಆದರೆ ಕೆಲವೇ ದುರದೃಷ್ಟರು ತಂದೆಯನ್ನು ಕಾಣದವರು.. ಅದರಲ್ಲೂ ಹೆಣ್ಣು ಮಗಳಿಗೆ ಸರ್ವಸ್ವವೂ ತನ್ನಪ್ಪ. ಆತ್ಮವಿಶ್ವಾಸ, ಸ್ಫೂರ್ತಿ ಮತ್ತು ನಂಬಿಕೆಗೆ ನಿಜವಾದ ಅರ್ಥಕೊಟ್ಟು ಜಗತ್ತನ್ನು ಮತ್ತಷ್ಟು ಸುಂದರವಾಗಿಸುವ ನಿಷ್ಕಲ್ಮಶ, ನಿಸ್ವಾರ್ಥ ಜೀವಿ.

ಮನೆಯವರ ಒಳಿತಿಗಾಗಿ ಶ್ರಮಿಸುತ್ತಾ, ತನ್ನ ಕನಸುಗಳಿಗೆ ತಣ್ಣೀರೆರಚಿ ಮಕ್ಕಳ ಬೆಳವಣಿಗೆಗೆ ದುಡಿಯುತ್ತಾ, ಏನೇ ಕಷ್ಟವಿದ್ದರೂ ನಾವು ಕೇಳಿದ್ದನ್ನು ಕೊಡಿಸುತ್ತ, ಎಲ್ಲ ನೋವುಗಳ ಮರೆಯಲು ಮನೆಯವರೊಂದಿಗೆ ಬೆರೆಯುವ ಮಕ್ಕಳ ನೋಡಿ ಮರೆಯುವ ಮೃದು ಮನಸ್ಸುಳ್ಳ ಮನುಷ್ಯ ಅಪ್ಪ.

ಬದುಕೆಂಬ ಹೋರಾಟದಲ್ಲಿ ದಿನನಿತ್ಯ ಕಷ್ಟ ಕಠಿಣತೆಗೆ ಎದುರಾಗಿ ನಿಂತು, ಎಲ್ಲ ತೊಡಕುಗಳ ದಾಟಿ, ತನ್ನವರ ಸಿದ್ಧಿಗೆ–ಅಭಿವೃದ್ಧಿಗೆ ಮಿಡಿಯುವ ಒಂಟಿಜೀವ. ಜೀವನದ ಮುಖ್ಯ ಹಂತಗಳಾದ ಬಾಲ್ಯ, ಯೌವನ, ಮುಪ್ಪು ಹೀಗೆ ಸದಾಕಾಲ ಮಹಿಳೆಗೆ ರಕ್ಷಣೆ, ಗೌರವ ನೀಡುತ್ತಾ ಬದುಕಿಗೆ ಬೆರಗಿನ ಬೆಡಗು ತರುವವನು. ಮಕ್ಕಳ ವಿದ್ಯೆ, ಉದ್ಯೋಗ, ಮದುವೆ ಮತ್ತಿತರ ಆಸೆಗಳನ್ನ ಪೂರೈಸುತ್ತಾ ಅದರಲ್ಲೇ ತನ್ನ ಖುಷಿ ಕಾಣುವವನು. ಅಪ್ಪ ಎಂದರೆ ಪ್ರೀತಿ–ಪ್ರೇಮದ ಜೇನು ಬೆರಸಿ ಸುಖವನ್ನು ಕ್ರೆಡಿಟ್ ಮಾಡುವ ಮತ್ತು ದುಃಖ–ದುಮ್ಮಾನಗಳನ್ನು ದೂರ ಮಾಡುವ ಎ ಟಿ ಎಂ ಕಾರ್ಡ್.



ಮಹಿಳೆಯರು ಇಷ್ಟು ಮುಂದುವರೆಯಲು ಶಿಸ್ತು ಕಲಿಸಿ ಸ್ಟ್ರಿಕ್ಟ್ ಆಗಿ, ನಂಬಿಕೆಯೆಂಬ ಸ್ವಾತಂತ್ರ್ಯಕೊಟ್ಟು, ನಾವು ಮಾಡುವ ಕೆಲಸಗಳಿಗೆ ಸಪೋರ್ಟ್ ಮಾಡಿ ಸಹಾಯಹಸ್ತ ಚಾಚಿದವರು ಹಾಗೆ ಸಮಾನ ಸ್ಥಾನ ಕೊಟ್ಟರು.

ಪ್ರತಿ ಪುರುಷನ ಯಶಸ್ಸಿನ ಹಿಂದೆ ಹೇಗೆ ಮಹಿಳೆ ಇರುತ್ತಾಳೊ ಹಾಗೆ ಪ್ರತಿ ಯಶಸ್ವಿ ಮಗಳ ಹಿಂದೆ ತನ್ನ ತಂದೆ ಇರುತ್ತಾರೆ ಎಂಬುದು ಅಕ್ಷರಶಃ ಸತ್ಯ. ಹಲವಾರು ಉದಾಹರಣೆಗಳು ಕಣ್ಣಮುಂದಿವೆ.

ನಾವಿರುವ ಸಮಾಜಕ್ಕಿಂತ ನಮ್ಮನ್ನು ನಂಬುವ ವ್ಯಕ್ತಿ, ನಾವು ಮಾಡುವ ಪ್ರತಿ ಕೆಲಸದಲ್ಲೂ ಮಾರ್ಗದರ್ಶನ ನೀಡುವ ಮೇಷ್ಟ್ರು..

ಒಂದು ನಿಮಿಷ ಕಾಣಿಸದೆ ಇದ್ದರೆ ಒದ್ದಾಡುವರು, ಮದುವೆ ಮಾಡಿ ಕಳುಹಿಸುವಾಗ ಮರುಗುವರು–ಮನಸಲ್ಲೇ ಕೊರಗುವರು, ಆದರೂ ಮತ್ತೊಂದು ಮನೆಯ ಬೆಳಗಲು ಮಗಳ ಕಳಿಸುವರು.

********

ಜಗತ್ತಿನ ಶ್ರೇಷ್ಠ ತಂದೆಯನ್ನು ಪಡೆದ ಹೆಮ್ಮೆ ನನ್ನದು. ನನ್ನ ಆತ್ಮವಿಶ್ವಾಸ ಯಶಸ್ಸಿನ ಪ್ರತೀಕ ನನ್ನ ಅಪ್ಪ. ಅವರೇ ನಮ್ಮ ದೈವ.

*****

**ಕವಿತಾ ಕೆ.**
ಸಹಾಯಕ ಲೆಕ್ಕಾಧಿಕಾರಿ, ಹಾರೋಹಳ್ಳಿ ಉಪವಿಭಾಗ
ಕನಕಪುರ ವಿಭಾಗ

# ಪ್ರಕೃತಿಯ ಮಡಿಲು–ಸೌಂದರ್ಯದ ಕಡಲು

ಬಾನ ಅಂಚಲ್ಲಿ ಕಾಮನಬಿಲ್ಲ ಮಾಯೆಯ ಓಲೆ..
ಭುವಿಯ ಮಣ್ಣು ಶುದ್ಧಗಂಧದ ಛಾಯೆಯ ಲೀಲೆ..
ಕಣ್ಣ ತುಂಬಿತ್ತು ಕಲ್ಪನೆಯ ಕುಂಚದ ಮುಗಿಲೋಲೆ..
ಪ್ರಕೃತಿಯ ಪರಿ ಮನಸ್ಸಿಗೆ ಮುದ ನೀಡೋ ಶಾಲೆ...!
ಅಂಬರದಲ್ಲಿ ಹೊದಿಸಿದ ಮೋಡದ ಸೀರೆ..
ಎಳೆ ಬಿಸಿಲು, ಚಂದ್ರನಿಗೆ ತರಿಸಿದೆ ನಿದಿರೆ..
ಹಕ್ಕಿಗಳ ಹಾಡಿನ ಇಂಚರ ಮನಸಿಗೆ ಕಲರವದ ಮದಿರೆ..
ಕ್ಷಣಕೊಮ್ಮೆ ಮಿನುಗುವ ಹೊಂಬಣ್ಣದ ಗಗನದ ತಾರೆ....!
ನಿಸರ್ಗದ ಮಡಿಲ ಮೇಲೆ..
ಹಸಿರು ಸೀರೆ ಉಟ್ಟ ನವಿಲೇ..
ಧುಮ್ಮಿಕ್ಕುವ ಜಲಧಾರೆ ಸೊಗಸಿನ ಮಾಲೆ..
ಚಂದ ಕಾಣಲು ಕಾಡು ಕಣಿವೆ ಹರಿವ ತೊರೆ ನಲ್ಲೆ..!
ನಮಿಸುವೆವು ನಾವು ಪ್ರಕೃತಿಯ ತಾಯೆ.....
ಅಘಾದ ಮೆರುಗಿನ ಹಸಿರಿನ ಸಿರಿಯೆ...!!



**ಕವಿತಾ ಕೆ**
ಸಹಾಯಕ ಲೆಕ್ಕಾಧಿಕಾರಿ, ಹಾರೋಹಳ್ಳಿ ಉಪವಿಭಾಗ
ಕನಕಪುರ ವಿಭಾಗ

# ಕೆ.ಇ.ಆರ್.ಸಿ. ಲೈಸೆನ್ಸ್‌ದಾರರ ಕಾರ್ಯಾಧಾರಿತ ಗುಣಮಟ್ಟದ ನಿಯಮಗಳು 2004 (standards of performance) ರ ಬಗ್ಗೆ ಬೆವಿಕಂ, ತನ್ನ ಗ್ರಾಹಕರು, ಸಿಬ್ಬಂದಿ ಹಾಗೂ ಅಧಿಕಾರಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಕಾರ್ಯಾಗಾರಗಳನ್ನು ಏರ್ಪಡಿಸಿತ್ತು

















## ಹುಟ್ಟುಹಬ್ಬದ ಶುಭಾಶಯಗಳು

2020ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ



## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2020ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಸಾಧಕರು ಇವರು : ಎಚ್.ಎನ್.ನಾಗಮೋಹನ ದಾಸ್

ಶ್ರೀ ಎಚ್. ಎನ್. ನಾಗಮೋಹನ ದಾಸ್ ಅವರು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಹೆಬ್ಬಣಿ ಗ್ರಾಮದಲ್ಲಿ ಜನಿಸಿದರು.

ಇವರ ತಂದೆ ನಾಗಪ್ಪನವರು ಸ್ವಾತಂತ್ರ್ಯ ಹೋರಾಟಗಾರರು. ಕಾಲೇಜು ಶಿಕ್ಷಣಕ್ಕಾಗಿ ಬೆಂಗಳೂರಿನತ್ತ ಪಯಣಿಸಿದ ನಾಗಮೋಹನ ದಾಸ್ ಆಯ್ದುಕೊಂಡಿದ್ದು ಕಾನೂನು ವಿಷಯ ಮುಂದೆ 1977 ರಲ್ಲಿ ವಕೀಲಿವೃತ್ತಿ ಆರಂಭಿಸಿದರು.

ವೃತ್ತಿಯಿಂದ ವಕೀಲರಾದರೂ, ಜನಪರ ಚಳವಳಿಗಳತ್ತಲೂ ಆಸಕ್ತಿ ತೋರುತ್ತಾ ಬಂದರು. ಇವರೊಳಗಿನ ಸಾಮಾಜಿಕ ಕಳಕಳಿಯು ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಮೀಸಲಾಯಿತು.

ರಾಜ್ಯಮಟ್ಟದ ಹಲವಾರು ಕ್ರಿಯಾಶೀಲ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿಯೂ ನಿಕಟ ಸಂಪರ್ಕವನ್ನಿಟ್ಟುಕೊಂಡರು.

2004 ರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾಗಿ ನೇಮಕವಾದ ನಾಗಮೋಹನ ದಾಸ್ ಅವರು ತಾವು ನೀಡಿದ ಹಲವಾರು ಪ್ರಮುಖ ತೀರ್ಪುಗಳಿಂದ ನ್ಯಾಯಾಂಗ ಕ್ಷೇತ್ರದಲ್ಲಿ ಪ್ರಸಿದ್ಧರಾದರು. ಸಂವಿಧಾನದ ಆಶಯಗಳನ್ನು ಆಳವಾಗಿ ಹಾಗೂ ಅರ್ಥಪೂರ್ಣವಾಗಿ ಇವರು ವ್ಯಾಖ್ಯಾನಿಸುವ ರೀತಿ ಎಲ್ಲರ ಪ್ರೀತಿ ವಿಶ್ವಾಸವನ್ನು ಗಳಿಸಿದೆ ಹಾಗೂ ಜನಮಾನ್ಯತೆ ಪಡೆದಿದೆ.

ನ್ಯಾಯಾಮೂರ್ತಿಗಳ ಬಿಡುವಿಲ್ಲದ ಕೆಲಸಗಳ ನಡುವೆಯೂ "ಸಮಾಜವಾದ", "ಕರ್ನಾಟಕದಲ್ಲಿ ನ್ಯಾಯಾಂಗ", "ಅಸ್ಪೃಶ್ಯತೆ ಮತ್ತು ಕಾನೂನು", "ಅರಿವು-ಬೆಳಕು", "ಅಂಬೇಡ್ಕರ್ ಮತ್ತು ಕಾರ್ಮಿಕ ಕಾನೂನು", "ಮಾಧ್ಯಮದ ದಿಕ್ಸೂಚಿ", "ಜಾಗತಿಕ ಧುರೀಣ ಅಂಬೇಡ್ಕರ್" ಎಂಬ ಕೃತಿಗಳು ಕನ್ನಡದಲ್ಲಿಯೂ, "ಚಾಲೆಂಜಸ್ ಅಂಡ್ ಪ್ರಾಬ್ಲಮ್ಸ್ ಬಿಫೋರ್ ಯಂಗ್ ಅಡ್ವೋಕೇಟ್ಸ್", ಹಾಗೂ "ಚಾಲೆಂಜಸ್ ಟು ದಿ ಕಾನ್ಸಿಟ್ಯೂಷನ್" ಎಂಬ ಅಮೂಲ್ಯ ಕೃತಿಗಳು ಆಂಗ್ಲ ಭಾಷೆಯಲ್ಲಿಯೂ ಇವರಿಂದ ಪ್ರಕಟಗೊಂಡಿವೆ.


ಎಚ್.ಎನ್.ನಾಗಮೋಹನ ದಾಸ್

2014 ರಲ್ಲಿ ನ್ಯಾಯಮೂರ್ತಿ ಹುದ್ದೆಯಿಂದ ನಿವೃತ್ತಿಯಾದ ನಂತರ ಆರಾಮವಾಗಿ ಕಾಲ ಕಳೆಯಲು ಇಚ್ಛಿಸದೆ ಸಾಮಾಜಿಕ ಚಳವಳಿ ಮತ್ತು ಸರ್ಕಾರದ ಆಡಳಿತಕ್ಕೆ ನೆರವಾಗುವ ಕಾರ್ಯದಲ್ಲಿ ತಮ್ಮನ್ನು ಹೆಚ್ಚೆಚ್ಚು ತೊಡಗಿಸಿಕೊಂಡರು. ಸರ್ಕಾರದ ಮತ್ತು ವಿವಿಧ ಸಾಂವಿಧಾನಿಕ ಹುದ್ದೆಗಳನ್ನು ಬಹಳ ಬದ್ಧತೆಯಿಂದ ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ನಾಗಮೋಹನ ದಾಸ್ ಅವರ ಪ್ರಾಮಾಣಿಕ ನಿಸ್ವಾರ್ಥ ಸೇವೆಯನ್ನು ಗುರುತಿಸಿ. ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. 16ನೆಯ ಕೋಲಾರದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ನಾಗಮೋಹನ್ ದಾಸ್ ಅವರಿಗೆ ಗೌರವ ಸಂದಿದೆ.

# ಶ್ರೀಮತಿ ಎಸ್.ಜಿ. ಸುಶೀಲಮ್ಮ

ನಮ್ಮ ನಾಡಿನ ಸಾಮಾಜಿಕ ರಂಗದ ಪ್ರಮುಖ ಅಂಗವೆನ್ನುವಂತೆ ಶ್ರೀಮತಿ ಸುಶೀಲಮ್ಮನವರು ಸೇವೆ ಸಲ್ಲಿಸುತ್ತಿರುವುದು, ಆ ನೆಲೆಯಲ್ಲಿ ಚಿಂತಿಸುವ ಇತರರಿಗೆ ಮಾದರಿಯಾಗಿದೆ.

ಬೆಂಗಳೂರಿನ ರೆಮ್ಕೋ ಕಾರ್ಖಾನೆಯಲ್ಲಿ ಸುಮಾರು ಒಂದೂವರೆ ದಶಕಗಳ ಕಾಲ ಶಿಶು ಸಂರಕ್ಷಣಾ ಕೇಂದ್ರದ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿ, ಅನಂತರ ಸಮಾಜಸೇವೆಗೆ ತಮ್ಮ ಬದುಕನ್ನು ಸಮರ್ಪಿಸಿಕೊಂಡದ್ದು ಈ ನಾಡಿನ ಸಾಮಾಜಿಕ ಇತಿಹಾಸದ ಪುಟಗಳಲ್ಲಿ ಸೇರಿಹೋಗಿದೆ. 1975 ರಿಂದ ಬೆಂಗಳೂರಿನ ಚೋಳನಾಯಕನಹಳ್ಳಿಯ ಸುಮಂಗಲಿ ಸೇವಾಶ್ರಮದ ಕ್ರಿಯಾಶೀಲ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.


ಶ್ರೀಮತಿ ಎಸ್.ಜಿ. ಸುಶೀಲಮ್ಮ

1979 ರಿಂದ ಈ ನಾಡಿನಲ್ಲಿ ಶ್ರೀಮತಿ ಸುಶೀಲಮ್ಮನವರು ಮಾಡಿದ ಸಾಧನೆಗಳು ನೂರಾರು. ಬೆಂಗಳೂರಿನ ಆಡುಗೋಡಿಯ ಕೊಳಚೆ ಪ್ರದೇಶದಲ್ಲಿ ನರ್ಸರಿ ಶಾಲೆ ಕರಕುಶಲ ತರಬೇತಿ, ಗ್ರಂಥಾಲಯಗಳ ಸ್ಥಾಪನೆ, ಹಿರಿಯ ಪ್ರಾಥಮಿಕ ಶಾಲೆ ಸ್ಥಾಪನೆ, ನಿರಾಶ್ರಿತ ಮಹಿಳೆಯರಿಗೆ ಹೊಲಿಗೆ ತರಬೇತಿ, ದುಡಿಯುವ ಮಹಿಳೆಯರಿಗೆ ವಸತಿಗೃಹ, ಕಲಿಕೆ-ಗಳಿಕೆ ಕಾರ್ಯಕ್ರಮ, ಗ್ರಾಮೀಣ ಪ್ರದೇಶಗಳಲ್ಲಿ ಅನೌಪಚಾರಿಕ ಶಿಕ್ಷಣ, ವಯಸ್ಕರ ಶಿಕ್ಷಣ ಕೇಂದ್ರದ ಸ್ಥಾಪನೆ, ಮಹಿಳೆಯರಲ್ಲಿ ಅನಕ್ಷರತೆ ನಿರ್ಮೂಲನೆ, ಬಡಮಕ್ಕಳಿಗೆ ಬ್ರೆಡ್ ಮತ್ತು ಹಾಲು ವಿತರಣೆ, ಕೌಟುಂಬಿಕ ಸಲಹಾ ಕೇಂದ್ರ, ಗೃಹಕೈಗಾರಿಕೆಗಳ ಸ್ಥಾಪನೆ, ಚಿಂದಿ ಆಯುವ ಮಕ್ಕಳ ಪುನರ್‌ವಸತಿ ಕೇಂದ್ರ – ಹೀಗೆ ಇನ್ನೂ ಮುಂತಾದ ವೈವಿಧ್ಯಮಯ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ನಾಡಿನ ತುಂಬೆಲ್ಲಾ ಪ್ರಸಿದ್ಧರಾಗಿ ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವವರಿಗೆ ಪ್ರೇರಣಾದಾಯಕರಾಗಿದ್ದಾರೆ. ನಾಡಿನ ಅನೇಕ ಸಾಮಾಜಿಕ ಸಂಘ-ಸಂಸ್ಥೆಗಳ ಗೌರವ ಪದಾಧಿಕಾರಿಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀಮತಿ ಸುಶೀಲಮ್ಮನವರು ನಿಸ್ವಾರ್ಥವಾಗಿ, ಜನಪರವಾಗಿ ಕೈಗೊಂಡ ಸೇವೆಯನ್ನ ಈ ನಾಡಿನ ಅನೇಕ ಸಂಘ-ಸಂಸ್ಥೆಗಳು ಗುರುತಿಸಿ ಜೊತೆಗೆ ಅಭಿನಂದಿಸಿ ಸನ್ಮಾನಿಸಿವೆ. ಶಿಶು ಕಲ್ಯಾಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ, ಜಾನಕಿದೇವಿ ಬಜಾಜ್ ಪುರಸ್ಕಾರ, ಮೈಸೂರು ದಸರಾ ಪ್ರಶಸ್ತಿ, ಶಿಶು ಕಲ್ಯಾಣಕ್ಕಾಗಿ ಕರ್ನಾಟಕ ಸರ್ಕಾರದ ಪ್ರಶಸ್ತಿ, ಸರ್ಕಾರದಿಂದ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಸವ ಪುರಸ್ಕಾರ, ಕೇಂದ್ರ ಸಮಾಜ ಕಲ್ಯಾಣ ಮಂಡಳಿಯಿಂದ ಡಾ.ದುರ್ಗಾಬಾಯಿ ದೇಶಮುಖ್ ಪ್ರಶಸ್ತಿ, ಇವೇ ಮುಂತಾದ ಪ್ರಮುಖ ಪ್ರಶಸ್ತಿ, ಪುರಸ್ಕಾರಗಳನ್ನು ಸುಶೀಲಮ್ಮನವರು ಪಡೆದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು 2017ನೇ ಸಾಲಿನ ರಾಜರ್ಷಿ ಶ್ರೀ 'ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ'ಯನ್ನು ಅವರಿಗೆ ನೀಡಿ ಗೌರವಿಸಿದೆ.

# ಇವರು ನಮ್ಮ ಸಾಹಿತಿಗಳು : ಬಿ.ಜಿ.ಎಲ್. ಸ್ವಾಮಿ

ಬಿ.ಜಿ.ಎಲ್. ಸ್ವಾಮಿ ಅವರ ಪೂರ್ಣ ಹೆಸರು ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ. ಆದರೆ ಬಿ.ಜಿ.ಎಲ್.ಸ್ವಾಮಿ ಎಂಬ ಹೆಸರಿನಿಂದಲೇ ಅವರು ಪರಿಚಿತರಾಗಿದ್ದರು.

ಅವರದು ಒಂದು ವಿಶಿಷ್ಟ ವ್ಯಕ್ತಿತ್ವ. ಅವರ ಆಸಕ್ತಿಯ ವಿಷಯಗಳು ಹತ್ತಾರು ಅವರ ಪ್ರಧಾನ ಅಧ್ಯಯನ ಸಸ್ಯ ಶಾಸ್ತ್ರವೇ ಆದರೂ, ಸಾಹಿತ್ಯ, ಸಂಗೀತ, ಚಿತ್ರಕಲೆ ಮೊದಲಾದ ವಿಷಯಗಳಲ್ಲೂ ಪ್ರಾವೀಣ್ಯ ಪಡೆದಿದ್ದರು. ಬಹುಭಾಷಾ ವಿಶಾರದರಾಗಿದ್ದರು.


ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ವಿಡಂಬನೆ, ಪ್ರವಾಸ ಕಥನ, ವಿಜ್ಞಾನ ಕೃತಿಗಳು, ವ್ಯಕ್ತಿ ಚಿತ್ರಗಳನ್ನು ವಿನೂತನವಾಗಿ ರಚಿಸಿ ಜೀವಕಳೆ ತುಂಬಿದ್ದಾರೆ.

ಸ್ವಾಮಿಯವರ ತಂದೆ ಕನ್ನಡದ ಸುಪ್ರಸಿದ್ಧ ಸಾಹಿತಿಗಳಾಗಿದ್ದ ಡಿ.ವಿ.ಗುಂಡಪ್ಪನವರು.

1918 ರ ಫೆಬ್ರುವರಿ 5 ರಂದು ಜನಿಸಿದ ಅವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಬೆಂಗಳೂರಿನಲ್ಲಿ ಮುಗಿಸಿದರು. 1936 ರಲ್ಲಿ ಸೆಂಟ್ರಲ್ ಕಾಲೇಜು ಸೇರಿ ಸಸ್ಯಶಾಸ್ತ್ರದಲ್ಲಿ ಬಿ.ಎಸ್‌ಸಿ.. ಆನರ್ಸ್ ಮುಗಿಸಿದರು. ನಂತರ ಸ್ವಲ್ಪ ಕಾಲ ಟಾಟಾ ಇನ್ಸ್‌ಟ್ಯೂಟ್‌ನಲ್ಲಿ 'ರಿಸರ್ಚ್ ಅಸಿಸ್ಟೆಂಟ್' ಆಗಿ ಕೆಲಸ ಮಾಡಿದರು. ಸ್ವಾಮಿ ಅವರ ಸಂಶೋಧನೆಗಳಿಗೆ ಮೈಸೂರು ವಿಶ್ವವಿದ್ಯಾಲಯ 1947 ರಲ್ಲಿ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿತು.

ನಂತರ ಅಮೇರಿಕದ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ತೆರಳಿದ ಅವರು ಅಲ್ಲಿ ಖ್ಯಾತ ಸಸ್ಯಶಾಸ್ತ್ರಜ್ಞ ರಾಗಿದ್ದ ಪ್ರೊ.ಇರ್ವಿಂಗ್ ಬೈಲಿ ಅವರ ಜತೆ ಸಂಶೋಧನೆಯಲ್ಲಿ ಕಾರ್ಯ ನಿರ್ವಹಿಸಿದರು.

1950ರಲ್ಲಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡು ಸುಮಾರು 30 ವರ್ಷಗಳ ಕಾಲ ಅಲ್ಲಿಯೇ ಸೇವೆ ಸಲ್ಲಿಸಿದರು.



ಬಿ.ಜಿ.ಎಲ್. ಸ್ವಾಮಿ

ಅವರು ಅಂತರರಾಷ್ಟ್ರೀಯ ವಿಜ್ಞಾನಿಯಾಗಿ, ಪ್ರೆಸಿಡೆನ್ಸಿ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ, ಮೈಸೂರು ಮಾನಸ ಗಂಗೋತ್ರಿಯ ಸಸ್ಯಶಾಸ್ತ್ರ ವಿಭಾಗದ ಸಂದರ್ಶನ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಬಹು ಖ್ಯಾತಿ ಪಡೆದರು.

'ಶಾಸನಗಳಲ್ಲಿ ಗಿಡಮರಗಳು' 'ಹಸುರು ಹೊನ್ನು' ಸಸ್ಯಪುರಾಣ', 'ಸಾಕ್ಷಾತ್ಕಾರದ ದಾರಿಯಲ್ಲಿ' ಸೇರಿದಂತೆ ಒಟ್ಟು 8 ಕೃತಿಗಳನ್ನು ಅವರು ವಿಜ್ಞಾನಕ್ಕೆ ಸಂಬಂಧಿಸಿದಂತೆ ರಚಿಸಿದ್ದಾರೆ.

ಕಾಲೇಜು ರಂಗ' 'ಕಾಲೇಜು ತರಂಗ' 'ಪ್ರಾಧ್ಯಾಪಕನ ಪೀಠದಲ್ಲಿ' 'ಪಂಚ ಕಲಶ ಗೋಪುರ' ಇತ್ಯಾದಿಗಳು ಸಾಹಿತ್ಯ ಕೃತಿಗಳು.

'ಅಮೇರಿಕದಲ್ಲಿ ನಾನು' ಅವರ ಪ್ರವಾಸ ಕಥನ.

ಅವರ ಕೃತಿಗಳಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕ್ರಿಶ್ಚಿಯನ್ ಲಿಟರರಿ ಸೊಸೈಟಿ ಬಹುಮಾನ ಹಾಗೂ ಬೀರಬಲ್ ಸಹಾನಿ ಪ್ರಶಸ್ತಿಗಳು ಲಭಿಸಿವೆ.

ಸಂಗೀತದಲ್ಲೂ ಅಪಾರ ಆಸಕ್ತಿಯನ್ನು ಹೊಂದಿದ್ದ ಸ್ವಾಮಿ ಅವರು 1984 ರ ನವೆಂಬರ್ 2 ರಂದು ಹೃದಯಾಘಾತದಿಂದ ಮೈಸೂರಿನಲ್ಲಿ ನಿಧನರಾದರು.

# ದೇವನೂರ ಮಹಾದೇವ



ದೇವನೂರ ಮಹಾದೇವ

ಕನ್ನಡದ ಸೃಜನಶೀಲ ಲೇಖಕರಲ್ಲಿ ಕಿರಿಯ ವಯಸ್ಸಿನಲ್ಲೇ ಪ್ರಸಿದ್ಧಿ ಪಡೆದವರು ದೇವನೂರ ಮಹಾದೇವ.

ಪಿ.ಯು.ಸಿ. ಓದಿನ ಹಂತದಲ್ಲಿಯೇ ಸಾಹಿತ್ಯ ರಚನೆಯಲ್ಲಿ ತೊಡಗಿದ ಅವರು ಅಲ್ಪ ಅವಧಿಯಲ್ಲೇ ತಮ್ಮ ಬರವಣಿಗೆಗಳ ಮೂಲಕ ದೊಡ್ಡ ಸಾಹಿತಿ ಎಂದು ಹೆಸರಾದವರು.

ನಂಜನಗೂಡು ತಾಲ್ಲೂಕಿನ ಕವಲಂದೆ ಗ್ರಾಮದಲ್ಲಿ 1948 ರ ಜೂನ್ 10 ರಂದು ಜನಿಸಿದ ಅವರ ಮೊದಲ ಕಥೆ 1968 ರಲ್ಲಿ ಪ್ರಕಟವಾಯಿತು. ಅವರ ತಾಯಿ ನಂಜಮ್ಮನವರು ಕವಲಂದೆಯವರು ತಂದೆ ನಂಜಯ್ಯ ದೇವನೂರಿನವರು. ಪಿ.ಯು.ಸಿ ಶಿಕ್ಷಣವನ್ನು ಮೈಸೂರಿನಲ್ಲಿ ಮಾಡಿದ ಅವರು ಬಿ.ಎ. ಹಂತದಲ್ಲಿ ಕನ್ನಡ, ಭಾಷಾ ವಿಜ್ಞಾನಗಳನ್ನು ಅಧ್ಯಯನ ಮಾಡಿ, 1973 ರಲ್ಲಿ ಕನ್ನಡ ಎಂ.ಎ. ಮುಗಿಸಿದರು.

1975 ರಲ್ಲಿ ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ನೌಕರಿಗೆ ಸೇರಿದರು.

14 ವರ್ಷಗಳ ಕಾಲ ಅಲ್ಲಿ ಕಾರ್ಯ ನಿರ್ವಹಿಸಿದ ಅವರು 1989 ರಲ್ಲಿ ರಾಜೀನಾಮೆ ನೀಡಿ ಹೊರಬಂದರು. ನೌಕರಿಗೆ ಸೇರಿದ ಸಂದರ್ಭದಲ್ಲಿ ದೇವನೂರು ಅವರು ಸುಮಿತ್ರಾಬಾಯಿಯವರನ್ನು ಮದುವೆ ಆದರು. ಸಮಾಜ ಶಾಸ್ತ್ರದ ಅಧ್ಯಾಪಕಿಯಾಗಿದ್ದ ಸುಮಿತ್ರಾ ಅವರು ಬಿ.ಎ. ಹಂತದಲ್ಲಿ ದೇವನೂರರ ಅಧ್ಯಾಪಕರಾಗಿದ್ದರು.

ಗಾತ್ರದ ದೃಷ್ಟಿಯಲ್ಲಿ ದೇವನೂರ ಮಹಾದೇವ ಅವರ ಒಟ್ಟು ಸಾಹಿತ್ಯ ರಾಶಿ ಸಣ್ಣದು. ದ್ಯಾವನೂರು ಕಥಾಸಂಕಲನ (1973), ಕಿರು ಕಾದಂಬರಿ ಒಡಲಾಳ (1978) ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕುಸುಮ ಬಾಲೆ (1984), 'ಮಾನವತೆ ಅಂತಾರಲ್ಲಾ' (ಲೇಖನಗಳ ಸಂಗ್ರಹ) ಅವು ಅವರ ಪ್ರಕಟಿತ ಕೃತಿಗಳು.

ದೇವನೂರರು ಸಾಂದರ್ಭಿಕವಾಗಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಪತ್ರಗಳನ್ನೂ, ಲೇಖನಗಳನ್ನೂ ಬರೆದಿದ್ದಾರೆ. ಪ್ರಮುಖ ದಲಿತ ಲೇಖಕರಾಗಿ, ದಲಿತ ಚಳವಳಿಯಲ್ಲಿ ಆರಂಭದ ಹಂತದಿಂದಲೂ ಮಹತ್ತರ ಪಾತ್ರವಹಿಸಿರುವ ಮುಂದಾಳಾಗಿ ಅವರ ಲೇಖನಗಳು ಮಹತ್ವವನ್ನು ಗಳಿಸಿವೆ. ಅಮೆರಿಕಾದ ಅಯೋವಾದಲ್ಲಿ ಅಂತರರಾಷ್ಟ್ರೀಯ ಬರಹಗಾರರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವನ್ನು ಪಡೆದಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ, ಕೊಲ್ಕತ್ತದ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಇವೇ ಮೊದಲಾದ ಪುರಸ್ಕಾರಗಳು ಲಭಿಸಿವೆ.

ಸಾಹಿತ್ಯದ ಜತೆಗೆ ಕೃಷಿಕರಾಗಿಯೂ ದೇವನೂರರು ಹೆಸರು ಮಾಡಿದ್ದಾರೆ.

**ಬೆವಿಕಂ, ತನ್ನ ಕಾರ್ಯ ಚಟುವಟಿಕೆಗಳ ಬಗ್ಗೆ ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ನಡೆದ ಸಭೆ, ಸಮ್ಮೇಳನಗಳಲ್ಲಿ ಮಳಿಗೆಗಳನ್ನು ಸ್ಥಾಪಿಸುವ ಮೂಲಕ ಭಾಗವಹಿಸಿತು.**











## ಆರೋಗ್ಯವೇ ಭಾಗ್ಯ – ಬೆಳ್ಳುಳ್ಳಿ

ಸಾಮಾನ್ಯವಾಗಿ ಪ್ರತಿ ಮನೆಯಲ್ಲಿಯೂ ನಿತ್ಯ ಬಳಕೆಯಲ್ಲಿರುವ ದ್ರವ್ಯ ಬೆಳ್ಳುಳ್ಳಿಯಾಗಿದೆ.

ಒಂದಲ್ಲ ಒಂದು ವಿಧದಲ್ಲಿ ಬೆಳ್ಳುಳ್ಳಿಯು ಅಡಿಗೆಯಲ್ಲಿ ಉಪಯೋಗಿಸಲ್ಪಡುತ್ತದೆ. ಇದರ ನಿತ್ಯ ಸೇವನೆ ಆರೋಗ್ಯಕಾರಕ ಹಾಗೂ ಶಕ್ತಿವರ್ಧಕ. ಕರುಳಿನ ದೋಷ ನಿವಾರಿಸುವುದು, ಕೆಮ್ಮು, ದಮ್ಮು, ಕಿವುಡತನ, ಶ್ವಾಸನಾಳದ ತೊಂದರೆಗಳನ್ನು ನಿವಾರಿಸುವುದು.

ಇದರಲ್ಲಿ ಖನಿಜಾಂಶಗಳು ಅಧಿಕವಾಗಿವೆ. ಹೃದ್ರೋಗ ನಿವಾರಣೆ, ವಾಯುಶಮನ, ಮೂತ್ರದೋಷ ನಿವಾರಣೆಯಲ್ಲಿ ಬೆಳ್ಳುಳ್ಳಿ ಪರಿಣಾಮಕಾರಿಯಾಗಿದೆ. ದೇಹದಲ್ಲಿನ ಕೊಬ್ಬಿನ ಅಂಶ ಕರಗಿಸಲು, ಜಠರ ದೋಷ ನಿವಾರಿಸಲು ಇದನ್ನು ಬಳಸುತ್ತಾರೆ.

ಬೆಳ್ಳುಳ್ಳಿಯನ್ನು ಜಜ್ಜಿ ನೀರಿನಲ್ಲಿ ಕುದಿಸಿ, ಸೋಸಿ ಜೇನುತುಪ್ಪ ಬೆರೆಸಿ ಕುಡಿಯುವುದರಿಂದ ಅಜೀರ್ಣ, ಅಗ್ನಿಮಾಂದ್ಯ, ಅರುಚಿಗಳ ನಿವಾರಣೆಗೆ ಸಹಾಯವಾಗುತ್ತದೆ.



ಬೆಳ್ಳುಳ್ಳಿಯನ್ನು ನುಣ್ಣಗೆ ಅರೆದು, ತುಪ್ಪದೊಡನೆ ಬಿಸಿಮಾಡಿ ಅನ್ನದೊಂದಿಗೆ ಬೆರೆಸಿ ಊಟ ಮಾಡುವುದರಿಂದ ವಾತರೋಗಗಳು ನಿವಾರಣೆಯಾಗಿ ಹಸಿವು ಹಾಗೂ ಜೀರ್ಣಶಕ್ತಿ ವೃದ್ಧಿಯಾಗುವುದು.

# ಕೊರೋನಾ ಯೋಧರಿಗೊಂದು ನಮನ

ಕೊರೋನಾ ಕೋವಿಡ್–19 ಎಂಬ ಮಾರಕ ಕಾಯಿಲೆ ವಿಶ್ವ ವ್ಯಾಪಿ ಕಾಡ್ಗಿಚ್ಚಿನಂತೆ ಹರಡಿರುವುದು ವಿಷಾದನೀಯ ಸಂಗತಿಯೇ ಸರಿ. ಈ ಕಾಯಿಲೆಯನ್ನು ಸಾಂಕ್ರಾಮಿಕವಾಗಿ ಹರಡುವುದನ್ನು ತಡೆಗಟ್ಟುವಲ್ಲಿ, ನಮ್ಮ ಭಾರತ ದೇಶ ಮುಂಚೂಣಿಯಲ್ಲಿರುವುದು ಹೆಮ್ಮೆಯ ವಿಷಯ. ಈ ನಿಟ್ಟಿನಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ನಮ್ಮ ದೇಶದ ಹಾಗೂ ರಾಜ್ಯದ ಆಡಳಿತಾಧಿಕಾರಿಗಳು ಸರಿಯಾದ ಸಮಯದಲ್ಲಿ ಲಾಕ್‌ಡೌನ್



ಕ್ರಮವನ್ನು ಅನುಸರಿಸುವುದರ ಜೊತೆಗೆ, ಅನೇಕ ಸೂಕ್ತ ಕ್ರಮಗಳನ್ನು ಕೈಗೊಂಡಿರುವುದು ಅತ್ಯಂತ ಮಹತ್ವದ ನಿರ್ಣಾಯಕ ಘಟ್ಟ. ಈ ಎಲ್ಲಾ ಮಹನೀಯರುಗಳಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾದದ್ದು ಭಾರತೀಯರಾದ ನಮ್ಮೆಲ್ಲರ ಕರ್ತವ್ಯ. ತಮ್ಮ ಜೀವನದ ಹಂಗನ್ನು ತೊರೆದು ಕೋವಿಡ್–19



ರೋಗಕ್ಕೆ ತುತ್ತಾದ ರೋಗಿಗಳನ್ನು ಉಪಚರಿಸಿದ, ಉಪಚರಿಸುತ್ತಿರುವ ನಮ್ಮೆಲ್ಲಾ ವೈದ್ಯರು, ದಾದಿಯರು, ನೈರ್ಮಲ್ಯ ಕಾರ್ಮಿಕರು ಅಲ್ಲದೆ, ಸಂಕಷ್ಟದ ಸಮಯದಲ್ಲಿ ನಮ್ಮೆಲ್ಲರ ಜೀವನವನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಶ್ರಮಿಸಿದ ಪೋಲೀಸ್ ಸಿಬ್ಬಂದಿ, ಗೃಹರಕ್ಷಕರು, ಪತ್ರಿಕೋದ್ಯಮ,







ಇಂಧನ ಇಲಾಖೆಯ ಸಿಬ್ಬಂದಿ, ಮಾಧ್ಯಮ ಸಿಬ್ಬಂದಿ ಹಾಗು ಎಲ್ಲಾ ಅಗತ್ಯ ಸೇವೆಗಳ ಅಧಿಕಾರಿ/ ಸಿಬ್ಬಂದಿ ವರ್ಗಗಳಿಗೆ ಹೃತ್ಪೂರ್ವಕ, ಭಾವಪೂರ್ಣ ಕೃತಜ್ಞತೆಗಳನ್ನು ಸಲ್ಲಿಸಲು ಬೆಸ್ಕಾಂ ತಂಡ ಹರ್ಷಿಸುತ್ತದೆ.

ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಅಗತ್ಯ ವಸ್ತುಗಳಾದ ದಿನಸಿ, ಹಣ್ಣು, ತರಕಾರಿಗಳು, ಔಷಧಗಳನ್ನು ಉಚಿತವಾಗಿ ಹಂಚಿ ಕರ್ತವ್ಯ ಪ್ರಜ್ಞೆ, ಮಾನವೀಯತೆ ಹಾಗೂ ಔದಾರ್ಯವನ್ನು ಮೆರೆದ ಎಲ್ಲಾ ಅಧಿಕಾರಿಗಳು, ಜನ ಪ್ರತಿನಿಧಿಗಳು, ಸಹೃದಯರು ಹಾಗೂ ಸಂಘ ಸಂಸ್ಥೆಗಳಿಗೆ ಅನಂತ ಅನಂತ ಧನ್ಯವಾದಗಳು.






## ಸಂಪಾದಕ ಮಂಡಳಿ

| | |
|---|---|
| **ಶ್ರೀ ಎಂ. ಬಿ. ರಾಜೇಶ್ ಗೌಡ,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ಡಾ. ಆರ್. ಸಿ. ಚೇತನ್,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಜಿ. ಅಶೋಕ್ ಕುಮಾರ್,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ಕೃಷ್ಣಮೂರ್ತಿ ಪಿ.** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಪ್ರಧಾನ ಕಾರ್ಯದರ್ಶಿ,** ಕವಿಪ್ರನಿನಿ ಪ.ಜಾತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ


ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **gmcr@bescom.co.in**


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ:** 1912

**ಸಂದೇಶ ಕಳುಹಿಸಿ:** 58888 **ವೆಬ್‌ಸೈಟ್:**


Printed at : Poornima Printers, Ph. 080 - 23359588